ರತ್ನಾ ರಾಜ್‌ಕುಮಾರ್, ಹಾಸನ

ಬಿಗ್‌ಬಾಸ್ ಮನೆ ನನ್ನದಾಗುವುದು ಯಾವಾಗ?



ನಿಮ್ಮ ಮನೆಯೂ ಮುಕ್ಕಾದ, ಬೆಲೆಯಿಲ್ಲದ, ಬೆಳಕಿಗಾಗಿ ಹಪಹಪಿಸುವ ನರಗೊಂಬೆಗಳ ಬೋನು ಆದಾಗ.

ನರಸಿಂಹ ಪೈ, ಕಾಸರಕೋಡ

ಹೆಣ್ಣು ಭ್ರೂಣಹತ್ಯೆಯಿಂದ ಸಮಾಜದ ಮೇಲೆ ಆಗುವ ಪರಿಣಾಮವೇನು?

ವಧುದಕ್ಷಿಣೆ, ವಧೂಪಚಾರಗಳು ಹರಾಜಿನ ಹಂತ ಮುಟ್ಟುತ್ತದೆ.

ವಿ. ಹೇಮಂತಕುಮಾರ್, ಬೆಂಗಳೂರು

ನಮ್ಮ ಮಾತನ್ನೇ ಅರ್ಥ ಮಾಡಿಕೊಳ್ಳದವರಿಗೆ ನಮ್ಮ ಮನಸ್ಸು ಅರ್ಥವಾಗುತ್ತಾ ರಾಮ್?

ಸಾಧ್ಯ. ಅವರು ಪಶುವೈದ್ಯರಾಗಿದ್ದರೆ.

ಡಿ.ಎಸ್. ಪಂಕಜ ಸುಬ್ರಹ್ಮಣ್ಯ, ಬೆಂಗಳೂರು

ಟಿ.ವಿ ಚಾನಲ್‌ನವರ ಚಂಡಮಾರುತದಂತಹ ಆರ್ಭಟ ಭಯ ಹುಟ್ಟಿಸುವಂತಿದೆಯಲ್ಲಾ...?




ಈಗಲೂ ಸೌಂಡ್ ಕೊಡುವಿರೆ? ಛೆ! ಅವನ್ನೆಲ್ಲ ಮ್ಯೂಟ್ ಮಾಡಿ ಕಾರ್ಟೂನಿನಂತೆ ನೋಡಬೇಕಷ್ಟೆ.

ಗಣಪತಿ ಕಂಚಿಪಾಲ, ಯಲ್ಲಾಪುರ

ವಾಲಿಯನ್ನು ಅಡಗಿ ಕೊಂದ ರಾಮನಿಗೂ, ಭಯೋತ್ಪಾದಕರಿಗೂ ವ್ಯತ್ಯಾಸವೇನು?

ವಾಲಿವಧೆಯಿಂದ ಉತ್ಪಾದನೆಯಾದದ್ದು ಭಯವಲ್ಲ, ಅಭಯ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಸಿಂಹ ಹುಲ್ಲು ತಿನ್ನುವ ಗತಿ ಬಂದರೆ?

ಆಗಲೂ ಜೀವಭಯದಿಂದ ಊದಲು, ಹಾರಕ, ಬರಗು ತಿನ್ನುವ ಮಟ್ಟಕ್ಕೆ ಇಳಿಯುವುದಿಲ್ಲ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಮನುಷ್ಯ ಪಂಚೇಂದ್ರಿಯಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳದಿದ್ದರೆ ಏನಾಗಬಹುದು?

ಪಂಚ್‌ಗಳ ಸುರಿಮಳೆ ಆಗಬಹುದು.

ರವೀಂದ್ರನಾಥ ಯಡಹಳ್ಳಿ, ಬೀಳಗಿ

ಬಯಲುದಾರಿಗೂ, ಕಾಡುದಾರಿಗೂ ಇರುವ ವ್ಯತ್ಯಾಸವೇನು?

ಅರಣ್ಯಾಧಿಕಾರಿ, ಗುತ್ತಿಗೆದಾರ ಸಂಚು ಹೂಡಿದರೆ ಇಂದಿನ ಕಾಡುದಾರಿಯೇ ನಾಳಿನ ಬಯಲುದಾರಿ.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ

ಇಬ್ಬರು ಪತ್ನಿಯರನ್ನು ಹೊಂದುವುದಕ್ಕೂ, ಎರಡು ಮೊಬೈಲ್‌ಗಳನ್ನು ಹೊಂದುವುದಕ್ಕೂ ವ್ಯತ್ಯಾಸ?

ಮೊಬೈಲಾದರೆ ಫೀಡ್ ಮಾಡಿದ್ದೇ ಚಾರ್ಜ್ ಆಗತ್ತೆ. ಸತಿಯರಲ್ಲಿ ಅವಳಿಗೆ ಫೀಡ್ ಮಾಡಿದರೆ ಇವಳು ಚಾರ್ಜ್ ಆಗ್ತಾಳೆ.

ಮಹಾವೀರ ಕಾಸರ, ಶಿವಮೊಗ್ಗ

ಹತ್ತು ಜುಟ್ಟುಗಳು ಒಂದಾಗಬಹುದು; ಎರಡು ಜಡೆಗಳು ಏಕೆ ಒಂದಾಗುವುದಿಲ್ಲ?

ಸೇರಿಸಿ ತುರುಬಾಗಿಸಿದರೆ ಮತ್ತೆ ಜಡೆ ಹೆಣೆಯುವಾಗ ಸಿಕ್ಕಾಪಟ್ಟೆ ಸಿಕ್ಕುಸಿಕ್ಕಾಗುವುದರಿಂದ.

ಅಮರಯ್ಯಾ ಪತ್ರಿಮಠ, ಸುರಪುರ

ಶ್ರೀರಾಮನಂತಹ ಪತಿಯನ್ನು ಬಯಸುವ ನಾರಿಯರು ಶ್ರೀಕೃಷ್ಣನ ತುಂಟಾಟವನ್ನು ಮೆಚ್ಚುವುದೇಕೆ?

ಗಾಂಭೀರ್ಯದ ಕಾಂಡದಲಿ ರಸಿಕತೆಯ ಹೂಗಳಿರಲ್ ಬಾಳು ಸೊಬಗು.

ಬಿ. ಚಂದ್ರೇಗೌಡ, ಬೆಂಗಳೂರು

ಆಲಿಸುವುದಕ್ಕೂ, ಪಾಲಿಸುವುದಕ್ಕೂ ಏನು ವ್ಯತ್ಯಾಸ?

ಸತಿಪತಿಯರ ವಿಷಯದಲ್ಲಂತೂ ಕೆಲವೇ ನಿಮಿಷಗಳು.

ಎಸ್.ಎನ್. ಮಹಾಬಲರಾವ್, ಎನ್ನಾರ್ಪುರ

ಅಡುಗೆ ಮಾಡದೆ ರುಚಿ ತಿಳಿಯುವುದು ಹೇಗೆ?

ಹೆಂಡ ತಯಾರಿಸದೆಯೇ ಟೈಟ್ ಆಗುವ ಹಾಗೆ.

## ಬಹುಮಾನಿತ ಪ್ರಶ್ನೆ

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ

ಹಣವೇ ಜೀವನ. ಅದರ ಮುಂದೆ ಎಲ್ಲವೂ ಶೂನ್ಯ ಎನ್ನುವವರಿಗೆ ನಿಮ್ಮ ಸಲಹೆ?

ಅವರು ಹಸಿದಾಗ ತಟ್ಟೆಯಲ್ಲಿ ನೋಟುಗಳನ್ನು ಬಡಿಸಿ. ನೋಟ ಬದಲಾಗುತ್ತದೆ.

ದಿನೇಶ್, ಗುಡ್ಡದೂರು

ಇತ್ತೀಚೆಗೆ ಸರ್ಕಾರದ ಕುಟುಂಬ ಯೋಜನೆಯ ಜಾಹೀರಾತು ಕಾಣುತ್ತಿಲ್ಲವಲ್ಲಾ...?

ಅಗತ್ಯವಿಲ್ಲ. ಎಲ್‌ಕೆಜಿಯ ದುಬಾರಿ ಫೀಸ್‌ನ ಬೋರ್ಡ್ ಕಂಡರೆ ಸಂತಾನದ ಯೋಚನೆ ಬಂದ್.

ಡಿ.ಎಲ್. ಸುರೇಶ್, ಬಳ್ಳಾರಿ

‘ಸಬ್ ಕಾ ವಿಕಾಸ್’ ಎಂದರೆ ಬಡತನ, ನಿರುದ್ಯೋಗ, ಹಸಿವಿನಿಂದ ಮುಕ್ತಗೊಳಿಸುವುದೆ?

ಆಶಯ ಅದೇ. ಆಗುವುದು ಮುಖಂಡರ, ಹೊಟ್ಟೆ, ಆಸ್ತಿಪಾಸ್ತಿಗಳ ವಿಕಾಸ.

ಸುನಿತಾ ಬಾಣಿ, ಬೆಂಗಳೂರು

ನಮಗೂ ಹಕ್ಕಿಯ ಹಾಗೆ ರೆಕ್ಕೆಗಳಿದ್ದಿದ್ದರೆ ನಮ್ಮ ಲೋಕ ಏನಾಗುತ್ತಿತ್ತು?



ಇರುವ ಗಿಡಮರಗಳ ಕೊಂಬೆ, ಪೊಟರೆಗಳೆಲ್ಲ ಮನುಷ್ಯರಿಂದಲೇ ಹೌಸ್‌ಫುಲ್ ಆಗಿರುತ್ತಿತ್ತು.

ಬಿ. ಬೋರೇಗೌಡ, ತಿರುಮಲನಗರ

ಕಾಯಕವೇ ಕೈಲಾಸ ಎಂದು ಗೊತ್ತಿದ್ದರೂ ದೇವಸ್ಥಾನ ಸುತ್ತುತ್ತಾರಲ್ಲಾ ಗುರುದೇವಾ...?

ಹೋಗಲು ಕಾರಣ ಪ್ರತಿಫಲದ್ದಲ್ಲ, ಪ್ರಸಾದದ್ದು. ಕೆಲವು ದೇಗುಲಗಳ ಪ್ರಸಾದದ ರುಚಿಗೆ ಸುರರೂ ಕ್ಯೂ ನಿಂತಾರು.

ಎಸ್. ಕೃಷ್ಣಮೂರ್ತಿ, ಬೆಂಗಳೂರು

ಪಾಕಿಸ್ತಾನದ ಕ್ರಿಕೆಟಿಗರು ಭಾರತೀಯ ಹೆಣ್ಣುಗಳನ್ನೇ ಏಕೆ ಮದುವೆಯಾಗುತ್ತಿದ್ದಾರೆ?

ಯುದ್ಧದಲ್ಲಿ ಗೆಲ್ಲಲಾಗದವರನ್ನು ಪ್ರೇಮದಿಂದ ಗೆಲ್ಲುವ ಯೋಜನೆ.

■ **ರಾಮ್**